# POLICE PUBLIC SCHOOL

(Managed by PPS(CBSE) TRUST)
Koramangala, Bengaluru-560034, Karnataka
Email: ppsk.bssc@gmail.com
Website: www.policepublicschoolksrpblr.org
Telephone No: 080-25506765,
6362598124


# VIBES FEBRUARY 2026

## ಸಮಯ ನಿರ್ವಹಣೆ ಮತ್ತು ಡಿಜಿಟಲ್ ವ್ಯಸನ ಕುರಿತು ಜಾಗೃತಿ ಕಾರ್ಯಕ್ರಮ








ಫೆಬ್ರವರಿ 3ರಂದು IV ಮತ್ತು V ತರಗತಿಯ ವಿದ್ಯಾರ್ಥಿಗಳಿಗೆ ಸಮಯ ನಿರ್ವಹಣೆ ಮತ್ತು ಡಿಜಿಟಲ್ ವ್ಯಸನ ವಿಷಯದ ಮೇಲೆ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮವನ್ನು ಗೋ ಶಾರ್ಪ್ನರ್ – ದ ಸ್ಕೂಲ್ ಸ್ಟುಡೆಂಟ್ ನೆಟ್ ವರ್ಕ್ ವತಿಯಿಂದ ನಡೆಸಲಾಯಿತು. ಕಾರ್ಯಕ್ರಮದ ಉದ್ದೇಶವು ವಿದ್ಯಾರ್ಥಿಗಳಲ್ಲಿ ಸಮಯವನ್ನು ಪರಿಣಾಮಕಾರಿಯಾಗಿ ಬಳಸುವ ಮಹತ್ವ ಹಾಗೂ ಡಿಜಿಟಲ್ ಉಪಕರಣಗಳ ಬಳಕೆಯಲ್ಲಿ ಸಮತೋಲನ ಕಾಪಾಡುವ ಅಗತ್ಯದ ಬಗ್ಗೆ ಜಾಗೃತಿ ಮೂಡಿಸುವುದಾಗಿತ್ತು. ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಜೀವನಶೈಲಿ ಅಭ್ಯಾಸಗಳು, ಜವಾಬ್ದಾರಿಗಳನ್ನು ಕೈಗೊಳ್ಳುವಿಕೆ ಹಾಗೂ ಅತಿಯಾದ ಡಿಜಿಟಲ್ ಬಳಕೆ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಕುರಿತು ಮಾಹಿತಿ ನೀಡಲಾಯಿತು. ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಸಮಯದ ನಿರ್ವಹಣೆ ಮತ್ತು ಡಿಜಿಟಲ್ ವ್ಯಸನದ ಕುರಿತು ಮಾಹಿತಿ ಪಡೆದುಕೊಂಡರು. ಕಾರ್ಯಕ್ರಮದ ಅಂತ್ಯದಲ್ಲಿ ಮನೋರಂಜನಾತ್ಮಕ ಹಾಗೂ ಜ್ಞಾನಾಧಾರಿತ ಚಟುವಟಿಕೆಯನ್ನು ನಡೆಸಲಾಯಿತು. ಶಾರ್ವರಿ (IVB), ಸಾಹಿತ್ಯಾ (IVB) ಮತ್ತು ಜೈಕೇತನ್ (VC) ವಿಜೇತರಾಗಿ ತಮ್ಮ ಉತ್ತಮ ಪ್ರದರ್ಶನಕ್ಕಾಗಿ ಧನ್ಯವಾದವನ್ನು ತಿಳಿಸಲಾಯಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸಂತೋಷಕರ ಜೀವನದ ಮಹತ್ವವನ್ನು ಅರಿಯಲು ಸಹಾಯಕವಾಯಿತು.

## ಪ್ರೀ-ಬೋರ್ಡ್ ಪರೀಕ್ಷೆ – IV

ಶಾಲೆಯ ಶೈಕ್ಷಣಿಕ ಸಿದ್ಧತೆಯ ಭಾಗವಾಗಿ ಫೆಬ್ರವರಿ ತಿಂಗಳ ಒಂದನೇ ವಾರದಲ್ಲಿ X ಮತ್ತು XII ತರಗತಿಯ ವಿದ್ಯಾರ್ಥಿಗಳಿಗಾಗಿ ಪ್ರೀ-ಬೋರ್ಡ್ ಪರೀಕ್ಷೆ – IV ಅನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಪರೀಕ್ಷೆಯು ಬೋರ್ಡ್ ಪರೀಕ್ಷಾ ಮಾದರಿಯ ಅನುಸಾರವಾಗಿ ವಿದ್ಯಾರ್ಥಿಗಳ ವಿಷಯ ಜ್ಞಾನ, ಸಮಯ ನಿರ್ವಹಣಾ ಕೌಶಲ್ಯ ಮತ್ತು ಪರೀಕ್ಷಾ ಸಿದ್ಧತೆಯನ್ನು ಮೌಲ್ಯಮಾಪನ ಮಾಡಿತು. ಪರೀಕ್ಷೆಯ ಫಲಿತಾಂಶಗಳ ಮೂಲಕ ಶಿಕ್ಷಕರಿಗೆ ವಿದ್ಯಾರ್ಥಿಗಳ ವಿಷಯವಾರು ಸಾಧನೆಯ ಬಗ್ಗೆ ಸ್ಪಷ್ಟ ಚಿತ್ರಣ ದೊರಕಿತು. ಈ ಮೌಲ್ಯಮಾಪನದ ಆಧಾರದ ಮೇಲೆ ಪರಿಹಾರಾತ್ಮಕ ತರಗತಿಗಳು, ಪುನರಾವಲೋಕನ, ಸಂಶಯ ನಿವಾರಣಾ ತರಗತಿಗಳು ಹಾಗೂ ವೈಯಕ್ತಿಕ ಶೈಕ್ಷಣಿಕ ಮಾರ್ಗದರ್ಶನವನ್ನು ನೀಡಲು ಯೋಜಿಸಿದೆ. ಇದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಾಗಿ ಅಂತಿಮ ಬೋರ್ಡ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಸಹಾಯವಾಗಲಿದೆ.

## ಸಿ ಟಿ ಇ ಟಿ ಪರೀಕ್ಷಾ ಕೇಂದ್ರ

ಶಾಲೆಯು ಫೆಬ್ರವರಿ 8ರಂದು ನಡೆದ ಕೇಂದ್ರ ಶಿಕ್ಷಕರ ಅರ್ಹತಾ ಪರೀಕ್ಷೆ ( ಸಿ ಟಿ ಇ ಟಿ )ಯ ಪರೀಕ್ಷಾ ಕೇಂದ್ರವಾಗಿ ಕಾರ್ಯನಿರ್ವಹಿಸಿತು. ಪರೀಕ್ಷೆಯನ್ನು ಸಮರ್ಪಕ ವ್ಯವಸ್ಥೆ, ಶಿಸ್ತು ಹಾಗೂ ಸಮನ್ವಯದೊಂದಿಗೆ ಯಶಸ್ವಿಯಾಗಿ ನಡೆಸಲಾಯಿತು. ಎಲ್ಲಾ ಅಭ್ಯರ್ಥಿಗಳಿಗೆ ಅನುಕೂಲಕರ ಮತ್ತು ಸುಸಂಘಟಿತ ವಾತಾವರಣ ಒದಗಿಸಲಾಯಿತು.

## ಪರೀಕ್ಷಾ ಪೆ ಚರ್ಚಾ 2026 – ನೇರ ಪ್ರಸಾರ









ಫೆಬ್ರವರಿ 6 ಮತ್ತು 9ರಂದು ನಡೆದ ಪರೀಕ್ಷಾ ಪೆ ಚರ್ಚಾ 2026 ಕಾರ್ಯಕ್ರಮದ ನೇರ ಪ್ರಸಾರದಲ್ಲಿ VIII ಮತ್ತು IXನೇ ತರಗತಿಯ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪರೀಕ್ಷಾ ಒತ್ತಡವನ್ನು ಸಮರ್ಥವಾಗಿ ಎದುರಿಸುವುದು, ಏಕಾಗ್ರತೆ ಕಾಯ್ದುಕೊಳ್ಳುವುದು ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಕುರಿತು ಅಮೂಲ್ಯ ಮಾರ್ಗದರ್ಶನ ನೀಡಿದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಧನಾತ್ಮಕ ಚಿಂತನೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿತು.

## ಆರೋಗ್ಯಕರ ಅಭ್ಯಾಸಗಳ ಬೆಳವಣಿಗೆ







ಫೆಬ್ರವರಿ 6ರಂದು VIನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಗೋ ಶಾರ್ಪ್ನರ್ ಸಂಸ್ಥೆಯ ವತಿಯಿಂದ ಒಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಟ್ರೋವಿ ಫುಡ್ಸ್ ನ ಶ್ರೀಮತಿ ಪ್ರೀತಿ ಅವರು ನಡೆಸಿಕೊಟ್ಟರು. ಆರೋಗ್ಯಕರ ಆಹಾರದ ಮಹತ್ವದ ಮಾಹಿತಿ ನೀಡುವ ಅಂಶಗಳನ್ನು ಕುರಿತು ಚರ್ಚಿಸಿದರು. ಕಾರ್ಯಕ್ರಮದಲ್ಲಿ ಪೌಷ್ಟಿಕ ಆಹಾರದ ಮಹತ್ವ, ಪ್ಯಾಕ್ ಮಾಡಿದ ಆಹಾರಗಳಲ್ಲಿ ಬಳಸುವ ಪದಾರ್ಥಗಳ ಬಗ್ಗೆ ಜಾಗೃತಿ ಮೂಡಿಸುವುದು ಮುಖ್ಯ ಉದ್ದೇಶವಾಗಿತ್ತು. ಸಮತೋಲನಯುತ ಆಹಾರವು ಉತ್ತಮ ಆರೋಗ್ಯ, ದೇಹದ ಬೆಳವಣಿಗೆ ಹಾಗೂ ಏಕಾಗ್ರತೆ ಮತ್ತು ಶಕ್ತಿಯನ್ನು ಹೆಚ್ಚಿಸಲು ಹೇಗೆ ಸಹಕಾರಿ ಎಂಬುದನ್ನು ವಿವರಿಸಿದರು. ವಿದ್ಯಾರ್ಥಿಗಳಿಗೆ ಕಾರ್ಬೋಹೈಡ್ರೇಟ್, ಪ್ರೋಟೀನ್, ವಿಟಮಿನ್, ಖನಿಜಗಳು ಮತ್ತು ಕೊಬ್ಬು ಇತ್ಯಾದಿ ಪೋಷಕಾಂಶಗಳ ಬಗ್ಗೆ ತಿಳಿಸಿ, ಅವುಗಳ ಕಾರ್ಯ ಮತ್ತು ಆಹಾರ ಮೂಲಗಳನ್ನು ಪರಿಚಯಿಸಲಾಯಿತು. ಆಹಾರದ ಲೇಬಲ್‌ಗಳನ್ನು ಹೇಗೆ ಓದಲು ಮತ್ತು ಹೆಚ್ಚಿನ ಸಕ್ಕರೆ, ಉಪ್ಪು, ಸಂರಕ್ಷಕ ದ್ರವ್ಯಗಳು ಹಾಗೂ ಕೃತಕ ಸೇರಿಕೆಗಳಂತಹ ಅನಾರೋಗ್ಯಕರ ಪದಾರ್ಥಗಳನ್ನು ಹೇಗೆ ಗುರುತಿಸಬೇಕು ಎಂಬುದರ ಬಗ್ಗೆ ವಿಶೇಷವಾಗಿ ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಚಟುವಟಿಕೆಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ವಿದ್ಯಾರ್ಥಿಗಳು ತಮ್ಮ ಸಂದೇಹಗಳನ್ನು ಕೇಳಿ ಸ್ಪಷ್ಟಪಡಿಸಿಕೊಂಡರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಆರೋಗ್ಯಕರ ಆಹಾರ ಪದ್ಧತಿಯ ಮಹತ್ವವನ್ನು ಅರಿತುಕೊಳ್ಳಲು ಸಹಾಯಮಾಡಿ, ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಪ್ರೇರಣೆಯಾಯಿತು.

## ಬೀಳ್ಕೊಡುಗೆ ಸಮಾರಂಭ












































ಫೆಬ್ರವರಿ 9ರಂದು X ಮತ್ತು XIIನೇ ತರಗತಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಯಿತು. ಈ ಸಮಾರಂಭವು ವಿದ್ಯಾರ್ಥಿಗಳ ಸಾಧನೆಗಳು, ಅವರ ಬೆಳವಣಿಗೆ ಮತ್ತು ಶಾಲೆಯೊಂದಿಗೆ ಹೊಂದಿದ ಸುಂದರ ಪ್ರಯಾಣವನ್ನು ಸ್ಮರಿಸುವುದರ ಜೊತೆಗೆ ಅವರ ಭವಿಷ್ಯದ ಯಶಸ್ಸಿಗಾಗಿ ಶುಭಾಶಯಗಳನ್ನು ಕೋರಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಎಂ.ಇ.ಎಸ್ ಶಿಕ್ಷಕರ ಮಹಾವಿದ್ಯಾಲಯದ ಪ್ರಾಧ್ಯಾಪಕರಾಗಿದ್ದು, ಮಾಜಿ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಗಣೇಶ ಭಟ್ಟ ಅವರು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ರಘುನಾಥ್ ಕೆ.ಎಸ್. ಕೆಎಸ್‌ಪಿಎಸ್, ಡಿಐಜಿಪಿ, ಕೆಎಸ್‌ಆರ್‌ಪಿ ಹಾಗೂ ಪಿಪಿಎಸ್ ಕಾರ್ಯದರ್ಶಿಗಳು ವಹಿಸಿದ್ದರು.

ಇವರೊಂದಿಗೆ ಶ್ರೀ ಸಂತೋಷಕುಮಾರ್ ಎಚ್.ವಿ. ಕೆಎಸ್‌ಪಿಎಸ್, ಕಮಾಂಡಂಟ್, 4ನೇ ಪಡೆ, ಕೆಎಸ್‌ಆರ್‌ಪಿ ಮತ್ತು ಪಿಪಿಎಸ್ ಸಹಾಯಕ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವು ಪ್ರಾರ್ಥನೆ ಹಾಗೂ ಸಭಾ ಗಣ್ಯರಿಂದ ದೀಪ ಬೆಳಗುವ ಮೂಲಕ ಕಾರ್ಯಕ್ರಮ ಆರಂಭವಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 'ಜ್ಯೋತಿದಾನ' ಮಾಡಿ ಭವಿಷ್ಯದಲ್ಲಿ ರೂಪಿಸಿಕೊಳ್ಳಬೇಕಾದ ಸನ್ನಡತೆಯ ಬಗ್ಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಮ್ಮ ಅನುಭವಗಳು ಮತ್ತು ಸ್ಮೃತಿಗಳನ್ನು ಹಂಚಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಾಲೆಯ ವತಿಯಿಂದ ಮಕ್ಕಳಿಗೆ ಸ್ಮರಣಿಕೆಗಳನ್ನು ನೀಡಲಾಯಿತು. ಮುಖ್ಯ ಅತಿಥಿಗಳು ತಮ್ಮ ಸಂದೇಶದಲ್ಲಿ ವಿದ್ಯಾರ್ಥಿಗಳು ಶಿಸ್ತಿನೊಂದಿಗೆ, ಪ್ರಾಮಾಣಿಕತೆಯಿಂದ ಹಾಗೂ ದೃಢನಿಶ್ಚಯದಿಂದ ತಮ್ಮ ಕನಸುಗಳನ್ನು ಸಾಧಿಸಲು ಪ್ರೇರೇಪಿಸಿದರು.ಈ ವಿದಾಯ ಸಮಾರಂಭವು ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ನಡುವೆ ಇರುವ ಸಂಬಂಧವನ್ನು ಪ್ರತಿಬಿಂಬಿಸಿ, ಎಲ್ಲರ ಮನದಲ್ಲಿ ಮಧುರ ಸ್ಮೃತಿಗಳನ್ನು ಮೂಡಿಸಿತು. ನಿರ್ಗಮಿಸುವ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಹಾರೈಕೆಗಳೊಂದಿಗೆ ಕಾರ್ಯಕ್ರಮ ಯಶಸ್ವಿಯಾಯಿತು.

## ಸಿಬಿಎಸ್ಇ ಮಂಡಳಿ ಪರೀಕ್ಷಾ ಕೇಂದ್ರ

ಫೆಬ್ರವರಿ ಮೂರನೇ ವಾರದಿಂದ **X** ಮತ್ತು **XII**ನೇ ತರಗತಿ ಮಂಡಳಿ ಪರೀಕ್ಷೆಗಳು ನಿಯಮಾನುಸಾರ ಹಾಗೂ ಸುಸಜ್ಜಿತ ವ್ಯವಸ್ಥೆಯೊಂದಿಗೆ ಆರಂಭಗೊಂಡಿವೆ. ಪರೀಕ್ಷೆಗಳು ಮಂಡಳಿಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಯಶಸ್ವಿಯಾಗಿ ನಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಅನುಕೂಲಕರ ಹಾಗೂ ಶಾಂತ ವಾತಾವರಣವನ್ನು ಕಲ್ಪಿಸಲು ಶಾಲಾ ಆಡಳಿತ ಮಂಡಳಿ ಸಮರ್ಪಕ ವ್ಯವಸ್ಥೆಗಳನ್ನು ಮಾಡಿದೆ. ಪರೀಕ್ಷಾ ಕೇಂದ್ರದಲ್ಲಿ ಭದ್ರತೆ, ಕುಳಿತುಕೊಳ್ಳುವ ವ್ಯವಸ್ಥೆ, ಪರಿಶೀಲನಾ ಕ್ರಮಗಳು ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಸೂಕ್ತವಾಗಿ ಒದಗಿಸಲಾಗಿದೆ. ಶಾಲೆಯ ಮುಖ್ಯಸ್ಥರು ಹಾಗೂ ಸಿಬ್ಬಂದಿಯ ಸಮರ್ಪಿತ ಮೇಲ್ವಿಚಾರಣೆಯಲ್ಲಿ ಪರೀಕ್ಷೆಗಳು ಸುವ್ಯವಸ್ಥಿತವಾಗಿ ಸಾಗುತ್ತಿದ್ದು, ಇದು ಶಾಲೆಯ ಶಿಸ್ತಿನ ಮತ್ತು ಶ್ರೇಷ್ಠತೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಶಾಲೆಯಲ್ಲಿ ಮಂಡಳಿ ಪರೀಕ್ಷಾ ಕೇಂದ್ರವನ್ನು ಯಶಸ್ವಿಯಾಗಿ ಆಯೋಜಿಸಿರುವುದು ಶಾಲೆಯ ಗೌರವವನ್ನು ಹೆಚ್ಚಿಸಿದೆ.

## ಬೋರ್ಡ್ ಪರೀಕ್ಷ ಆರಂಭ – ಏಕಾಗ್ರತೆ, ಧೈರ್ಯ ಮತ್ತು ಸಿದ್ಧತೆ




ಶಾಲೆಯ **X** ಹಾಗೂ **XII** ವಿದ್ಯಾರ್ಥಿಗಳು ತಮ್ಮ ಬೋರ್ಡ್ ಪರೀಕ್ಷೆಯನ್ನು ಯಶಸ್ವಿಯಾಗಿ ಆರಂಭಿಸಿದ್ದಾರೆ. ಈ ಪರೀಕ್ಷೆಗಳು ಫ್ರೀಡಮ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸುಸಜ್ಜಿತ ವ್ಯವಸ್ಥೆಯೊಂದಿಗೆ ನಡೆಯುತ್ತಿವೆ. ವಿದ್ಯಾರ್ಥಿಗಳು ಆತ್ಮವಿಶ್ವಾಸ ಹಾಗೂ ದೃಢನಿಶ್ಚಯದೊಂದಿಗೆ ಪರೀಕ್ಷೆಗಳಿಗೆ ಹಾಜರಾಗಿದ್ದು, ತಮ್ಮ ಶೈಕ್ಷಣಿಕ ಜೀವನದ ಮಹತ್ವದ ಹಂತವನ್ನು ಪ್ರವೇಶಿಸಿದ್ದಾರೆ. ಇದು ಅವರ ವಿದ್ಯಾಭ್ಯಾಸದ ಪಯಣದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಹಾಗೂ ಭವಿಷ್ಯದಲ್ಲಿ ಯಶಸ್ಸು ದೊರಕಲಿ ಎಂದು ಹಾರೈಸುತ್ತೇವೆ.

## ಆರೋಗ್ಯಕರ ಆಹಾರ ದಿನಾಚರಣೆ




ಶಾಲೆಯ ಪ್ರೀ-ಪ್ರೈಮರಿ ವಿಭಾಗದಲ್ಲಿ ಫೆಬ್ರವರಿ **26** ರಂದು **"Healthy Bites Day"** ಅನ್ನು ಹರ್ಷಭರಿತವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಮಕ್ಕಳಲ್ಲಿ ಆರೋಗ್ಯಕರ ಆಹಾರ ಪದ್ಧತಿಗಳನ್ನು ಬೆಳೆಸುವುದು ಹಾಗೂ ಪೌಷ್ಟಿಕ ಆಹಾರದ ಮಹತ್ವವನ್ನು ತಿಳಿಸಿಕೊಡುವುದು ಆಗಿತ್ತು. ಈ ದಿನ ವಿದ್ಯಾರ್ಥಿಗಳು ತಮ್ಮ ಮನೆಯಿಂದ ತಾಜಾ ಮತ್ತು ಆರೋಗ್ಯಕರ ತಿಂಡಿಗಳನ್ನು ತರಲಾಗಿತ್ತು. ತಾಜಾ ಕತ್ತರಿಸಿದ ಹಣ್ಣುಗಳು, ಹಣ್ಣು ಸಲಾಡ್, ತರಕಾರಿ ಸ್ಯಾಂಡ್‌ವಿಚ್, ಚಕ್ಕುಲಿ, ನಿಪ್ಪಟ್ಟು, ಕೊಡಬಳೆ ಮುಂತಾದ ಸಾಂಪ್ರದಾಯಿಕ ತಿಂಡಿಗಳು ಹಾಗೂ ಲಡ್ಡು, ಕಡಲೆ ಚಿಕ್ಕಿ, ತೆಂಗಿನ ಬರ್ಫಿ, ಒಬ್ಬಟ್ಟು ಮುಂತಾದ ಮನೆಯಲ್ಲಿ ತಯಾರಿಸಿದ ಸಿಹಿ ಪದಾರ್ಥಗಳನ್ನು ಮಕ್ಕಳು ಹರ್ಷದಿಂದ ತಮ್ಮ ಸಹಪಾಠಿಗಳೊಂದಿಗೆ ಹಂಚಿಕೊಂಡರು. ಶಿಕ್ಷಕರು ಮಕ್ಕಳಿಗೆ ಪೌಷ್ಟಿಕ ಆಹಾರದ ಲಾಭಗಳ ಬಗ್ಗೆ ಸರಳವಾಗಿ ತಿಳಿಸಿದರು. ಜಂಕ್ ಫುಡ್‌ಗಳಾದ ಚಿಪ್ಸ್, ಚಾಕಲೇಟ್, ಕ್ರೀಮ್ ಬಿಸ್ಕಟ್, ಸಾಫ್ಟ್ ಡ್ರಿಂಕ್ಸ್ ಹಾಗೂ ಕೃತಕ ಬಣ್ಣಗಳು ಮತ್ತು ಸಂರಕ್ಷಕ ಪದಾರ್ಥಗಳನ್ನು ಹೊಂದಿರುವ ಆಹಾರಗಳನ್ನು ತರುವುದನ್ನು ತಪ್ಪಿಸುವಂತೆ ಮುಂಚಿತವಾಗಿ ತಿಳಿಸಲಾಗಿತ್ತು. ಎಲ್ಲಾ ಪೋಷಕರೂ ಈ ಸೂಚನೆಗಳನ್ನು ಪಾಲಿಸಿ ಉತ್ತಮ ಸಹಕಾರ ನೀಡಿದರು. ಮಕ್ಕಳು ಆರೋಗ್ಯಕರ ಆಹಾರ ಸೇವನೆಯ ಮಹತ್ವವನ್ನು ಅರಿತು ಸಂತೋಷದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮವು ಮಕ್ಕಳಲ್ಲಿ ಉತ್ತಮ ಆಹಾರ ಅಭ್ಯಾಸಗಳನ್ನು ಬೆಳೆಸುವಲ್ಲಿ ಪರಿಣಾಮಕಾರಿಯಾಗಿದ್ದು, ಯಶಸ್ವಿಯಾಗಿ ನೆರವೇರಿತು.

## ಯುವ ಮನಸ್ಸುಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಲೋಕವನ್ನು ಅನ್ವೇಷಿಸುತ್ತಿವೆ

















ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಫೆಬ್ರವರಿ **28** ರಂದು **V** ರಿಂದ **VII**ನೇ ತರಗತಿಯ ವಿದ್ಯಾರ್ಥಿಗಳು ಭಾರತದ ಪ್ರಮುಖ ಭೂಮಾಪನ ಸಂಸ್ಥೆಯಾದ ಸರ್ವೆ ಆಫ್ ಇಂಡಿಯಾ ಸಂಸ್ಥೆಗೆ ಭೇಟಿ ನೀಡಿದರು. ಈ ಭೇಟಿಯ ಉದ್ದೇಶವು ವಿದ್ಯಾರ್ಥಿಗಳಿಗೆ ಭೂಪಟ ನಿರ್ಮಾಣ, ಭೂಮಾಪನ ತಂತ್ರಜ್ಞಾನ ಹಾಗೂ ವಿಜ್ಞಾನ ಕ್ಷೇತ್ರದ ಪ್ರಾಯೋಗಿಕ ಜ್ಞಾನವನ್ನು ಪರಿಚಯಿಸುವುದಾಗಿತ್ತು.ಭೇಟಿಯ ಆರಂಭದಲ್ಲಿ ಸಂಸ್ಥೆಯ ಅಧಿಕಾರಿಗಳು ಸರ್ವೇ ಆಫ್ ಇಂಡಿಯಾದ ಸ್ಥಾಪನೆ, ಅದರ ಇತಿಹಾಸ ಹಾಗೂ ದೇಶದ ಅಭಿವೃದ್ಧಿಯಲ್ಲಿ ಅದರ ಪಾತ್ರದ ಬಗ್ಗೆ ವಿವರಿಸಿದರು. ಭಾರತದ ಗಡಿ ಗುರುತುಪಡಿಸುವುದು, ರಸ್ತೆ, ನದಿ, ಪರ್ವತ ಹಾಗೂ ವಿವಿಧ ಭೌಗೋಳಿಕ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ಈ ಸಂಸ್ಥೆಯ ಮಹತ್ವದ ಪಾತ್ರವನ್ನು ವಿವರಿಸಿದರು.ವಿದ್ಯಾರ್ಥಿಗಳಿಗೆ ಡಿಜಿಟಲ್ ಮ್ಯಾಪಿಂಗ್, ಜಿಪಿಎಸ್ ತಂತ್ರಜ್ಞಾನ, ಉಪಗ್ರಹದ ಮೂಲಕ ಭೂಮಿಯ ಚಿತ್ರಣ ಪಡೆಯುವ ವಿಧಾನ, ಟೋಟಲ್ ಸ್ಟೇಷನ್ ಉಪಕರಣಗಳ ಬಳಕೆ ಹಾಗೂ ಜಿಯೋಸ್ಪೇಷಿಯಲ್ ತಂತ್ರಜ್ಞಾನಗಳ ಬಗ್ಗೆ ಪ್ರದರ್ಶನದ ಮೂಲಕ ತಿಳಿಸಲಾಯಿತು. ವಿದ್ಯಾರ್ಥಿಗಳು ನಕ್ಷೆಗಳ ವಿವಿಧ ಮಾದರಿಗಳನ್ನು ವೀಕ್ಷಿಸಿ, ಅವುಗಳ ತಯಾರಿಕಾ ಪ್ರಕ್ರಿಯೆಯನ್ನು ತಿಳಿದುಕೊಂಡರು. ವಿದ್ಯಾರ್ಥಿಗಳಿಗೆ ಉಪಕರಣಗಳನ್ನು ಹತ್ತಿರದಿಂದ ನೋಡುವ ಹಾಗೂ ಪ್ರಶ್ನೆಗಳು ಕೇಳುವ ಅವಕಾಶವೂ ನೀಡಲಾಯಿತು.ಸಂಸ್ಥೆಯ ವಿಜ್ಞಾನಿಗಳು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮನೋಭಾವವನ್ನು ಬೆಳೆಸುವ ಮಹತ್ವವನ್ನು ತಿಳಿಸಿದರು. ರಾಷ್ಟ್ರೀಯ ವಿಜ್ಞಾನ ದಿನದ ಉದ್ದೇಶವಾದ ವಿಜ್ಞಾನ ಅರಿವು ಮತ್ತು ವೈಜ್ಞಾನಿಕ ಚಿಂತನೆ ಬೆಳೆಸುವ ಸಂದೇಶವನ್ನು ಹಂಚಿಕೊಂಡರು. ವಿದ್ಯಾರ್ಥಿಗಳು ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ತೋರಿದರು ಮತ್ತು ಭವಿಷ್ಯದಲ್ಲಿ ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಪ್ರೇರಣೆ ಪಡೆದರು.ಈ ಶೈಕ್ಷಣಿಕ ಪ್ರವಾಸವು ವಿದ್ಯಾರ್ಥಿಗಳಿಗೆ ಪಾಠಪುಸ್ತಕದ ಹೊರತಾಗಿ ಪ್ರಾಯೋಗಿಕ ಅನುಭವ ನೀಡಿದ್ದು, ಅವರ ಜ್ಞಾನವರ್ಧನೆಗೆ ಬಹಳ ಉಪಯುಕ್ತವಾಯಿತು.

*That's a wrap for now!*
*We'll be back soon with more updates, fun features and school highlights.*
*Thanks for staying connected!*